ಇ) ಸಂಘದ ಉಪನಿಯಮಗಳ ಪ್ರಕಾರ ಸಂಘದ ಸದಸ್ಯರುಗಳಿಗೆ ಕಮ್ಮಾರಿಕೆ, ಬಿದಿರು ಕಸುಬು ಇತ್ಯಾದಿ ಕೈಗಾರಿಕೆಗಳನ್ನು ನಡೆಸಲು ಹಣಕಾಸಿನ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿರುತ್ತದೆ.

ಈ) ಸಂಘವು ಖಾದಿ ಗ್ರಾಮೋದ್ಯೋಗ ಮಂಡಳಿಗೆ ರೂ. 2,27,432.00ಗಳ ಕೈಗಾರಿಕಾ ಸಾಲವನ್ನು ತುಮಕೂರು ಕೈಗಾರಿಕಾ ಬ್ಯಾಂಕ್‌ಗೆ ರೂ. 25,765.00ಗಳ ಸಾಲ ಮರುಪಾವತಿ ಮಾಡದೆ ಸುಸ್ತಿಯಾಗಿರುತ್ತದೆ. ಸದಸ್ಯರುಗಳಿಂದ ಸಾಲದ ಬಾಬ್ತು ರೂ. 1.70,136.00 ಬರಬೇಕಾಗಿದ್ದು, ಸಂಘವು ರೂ. 1,95,224.00 ಗಳಷ್ಟು ಕ್ಲೋಢೀಕೃತ ನಷ್ಟದಲ್ಲಿರುತ್ತದೆ ಸದಸ್ಯರಿಂದ ಅಲ್ಪ ಪ್ರಮಾಣದಲ್ಲಿ ವಸೂಲಾದ ಸಾಲದ ಮೊತ್ತದಲ್ಲಿ ಸಂಘದ ಬಾಡಿಗೆ ಇನ್ನಿತರ ಖರ್ಚುಗಳನ್ನು ಭರಿಸಲಾಗುತ್ತಿದ್ದು, ಸಂಘದ ವಹಿವಾಟು ಕುಂಠಿತವಾಗಿರುತ್ತದೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಸರ್ಕಾರವು ರೂ. 1,665.00ಗಳ ಶೇರು ಹಣವನ್ನು ಧನಸಹಾಯ ರೂಪದಲ್ಲಿ ನೀಡಿರುತ್ತದೆ.

ಉ) ಈ ಸಂಘವು ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸಿ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿಕೊಂಡು ಪುನಃಶ್ಚೇತನಗೊಳಿಸಲು ಕ್ರಮವಹಿಸಲಾಗುವುದು. ಈ ಮೂಲಕ ಸಣ್ಣ ಪ್ರಮಾಣದ ಕಸುಬುದಾರರಿಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು.

ತುರುವೇಕೆರೆ ತಾಲ್ಲೂಕಿನ ದುಂಡ ಗ್ರಾಮದ ಬಳಿ ಹೇಮಾವತಿ ಯೋಜನೆಯ ಚಾನಲ್ ಕೆಲಸ ಸ್ಥಗಿತಗೊಂಡಿರುವ ಬಗ್ಗೆ

4245 (4958) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದುಂಡ ಗ್ರಾಮದ ಬಳಿ ಬರುವ ಚಾನಲ್ (ರೈಲ್ವೆ ಲೈನ್ ಕೆಳಗೆ ಹಾದುಹೋಗುವ) ಕೆಲಸ ಸ್ಥಗಿತಗೊಳ್ಳಲು ಕಾರಣವೇನು;

ಆ) ರೈಲ್ವೆ ಇಲಾಖೆಗೆ ಹಣ ಕಟ್ಟಿದ್ದರೂ ಅನುಮತಿ ಕೊಡದಿರಲು ಕಾರಣವೇನು;

ಇ) ಹಲವಾರು ವರ್ಷದಿಂದ ರೈತರು ಆ ಭಾಗದಲ್ಲಿ ನೀರಿಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಈ) ಈಗಲಾದರೂ ಕೆಲಸ ಪ್ರಾರಂಭ ಮಾಡಲಾಗುವುದೇ?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ರೈಲ್ವೆ ಇಲಾಖೆಗೆ ಪಾವತಿಸಬೇಕಾಗಿದ್ದ ಠೇವಣಿ ಮೊತ್ತ ರೂ. 29,69,197.00ಗಳು ಪಾವತಿಸಲು ವಿಳಂಬವಾದ್ದರಿಂದ ಕಾಮಗಾರಿ ಪ್ರಾರಂಭಿಸಲು ತಡವಾಗಿರುತ್ತದೆ.

ಆ) ರೈಲ್ವೆ ಇಲಾಖೆಯಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲು ರೂ. 20,69,197,00 ಗಳನ್ನು ಠೇವಣಿ ಇಡಲಾಗಿದೆ. ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆದಿರುತ್ತಾರೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ರೈಲ್ವೆ ಇಲಾಖೆಯು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆದಿರುತ್ತಾರೆ.

ಕಾವೇರಿ ನೀರಾವರಿ ನಿಗಮದ ಯೋಜನೆಗಳ ಬಗ್ಗೆ

4246 (4959) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?